**ದಿನಾಂಕಃ 16.12.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.**

**ಪಾಟೀಸವಾಲುಃ ಅರ್ಜಿದಾರರ ಪರ ವಕೀಲರಿಂದಃ**

ನಿಂಗೇಗೌಡರು ನನ್ನ ದೊಡ್ಡಪ್ಪ ಎಂದರೆ ಸರಿ. ನಾವೆಲ್ಲರೂ ಸೇರಿ ಮೋಸ ಮಾಡುವ ಉದ್ದೇಶದಿಂದ ವಿಲ್ಲನ್ನು ಸೃಷ್ಟಿಸಿರುತ್ತೇವೆ ಎಂದರೆ ಸರಿಯಲ್ಲ. ದೊಡ್ಡಮ್ಮನಾದ ಅಂದರೆ ನಿಂಗೇಗೌಡರ ಪತ್ನಿಗೆ ಯಾವುದೇ ಹಿಸ್ಸೆಯನ್ನು ಕೊಟ್ಟಿರುವುದಿಲ್ಲ ಸಾಕ್ಷಿಯು ಮುಂದುವರೆದು ಕೇಸು ಚಾಲ್ತಿಯಲ್ಲಿರುವುದರಿಂದ 5/1 ಭಾಗ ಇರುತ್ತದೆ. ಒಟ್ಟು 4 ಸರ್ವೆ ನಂಬರ್ ಗಳು ಇದ್ದು ಅವುಗಳಲ್ಲಿ 2 ಸರ್ವೆ ನಂಬರ್ ಗಳು ಮಾತ್ರ ಗೊತ್ತು. ವಿಲ್ಲಲ್ಲಿ 5/1 ಭಾಗದ ಹಕ್ಕನ್ನು ಬರೆದಿರುತ್ತಾರೆ. ಕೆಲವು ಆಸ್ತಿ ಮಂಜೂರಾದ ಆಸ್ತಿ ಹಾಗೂ ಗೋಮಾಳ ಎಂದರೆ ಅದು ಜಂಟಿ ಖಾತೆಯಲ್ಲಿರುತ್ತದೆ ಎಂದರೆ ಸರಿ . ಅದು ದುರಸ್ತಿ ಆಗಿರುವುದಿಲ್ಲ ಅಳತೆ ಆಗಿರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. ಕೇಸು ಚಾಲ್ತಿಯಲ್ಲಿದ್ದರಿಂದ ವಿಲೇವಾರಿ ಆಗದೇ ಇದ್ದ ಕಾರಣ ನಿಂಗೇಗೌಡರಿಗೆ ಯಾವುದೇ ರೀತಿಯ ವಿಲ್ ಬರೆಯಲು ಅಧಿಕಾರ ಇರಲಿಲ್ಲ ಎಂದರೆ ಸರಿಯಲ್ಲ. ನಿಂಗೇಗೌಡರ ನಂತರ ಅವರ ಪತ್ನಿಗೂ ಆಸ್ತಿಯಲ್ಲಿ ಹಕ್ಕು ಇರುತ್ತದೆ ಎಂದರೆ ಸರಿ. ನಾವು ನಿಂಗೇಗೌಡರ ಮಕ್ಕಳಿಗೆ ಮೋಸ ಮಾಡುವ ಉದ್ದೇಶದಿಂದ ವಿಲ್ಲನ್ನು ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಅವರ ಕಷ್ಟ ಸುಖಗಳನ್ನು ಅವರ ಮೊಮ್ಮಗನೇ ನೋಡಿರುತ್ತಾನೆ. ವಿಲ್ 4 ನೇ ಎದುರುದಾರರ ಮನೆಯಲ್ಲೆ ಇತ್ತು ಅದನ್ನು ಸೃಷ್ಟಿಸಿಕೊಂಡಿದ್ದರು ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದಂತೆ ಗಣಕೀಕರಣಗೊಳಿಸಿ ಮುದ್ರಿಸಲಾಯಿತು.)

ಓ ಹೇ ಕೇ ಸರಿ ಇದೆ

ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ
ನ್ಯಾಯಾಧೀಶರು, ಚನ್ನರಾಯಪಟ್ಟಣ